**ಸಾಕ್ಷಿಯನ್ನು ದಿನಾಂಕ 26.9.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್ ವಕೀಲರಿಂದಃ**

ನನ್ನ ಮದುವೆ 13 ವರ್ಷಗಳ ಹಿಂದೆ ಆಗಿದೆ. ಮೃತ ರೇಶ್ಮಾಬಾನು ಅವರ ಮದುವೆಯಾದ 6 ವರ್ಷಗಳ ನಂತರ ನನ್ನ ಮದುವೆಯಾಗಿದೆ. ನಾನು ಪ್ರೀತಿ ಮಾಡಿ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ನಿಜ. ನಾನು ಪ್ರೀತಿ ಮದುವೆ ಮಾಡಿಕೊಂಡಿದ್ದು ನನ್ನ ತಂದೆಗೆ ಇಷ್ಟವಾಗಿಲ್ಲವಾದ್ದರಿಂದ ಅವರು ನಮ್ಮನ್ನು ಮನೆಗೆ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ಬಳಿಕ ನಾನು ಗೌಸಿಯಾನಗರದಲ್ಲಿ ಮನೆ ಮಾಡಿಕೊಂಡು ವಾಸವಿದ್ದೆ ಎಂದರೆ 1 ತಿಂಗಳು ಗೌಸಿಯಾನಗರದಲ್ಲಿದ್ದೆ, ನಂತರ ನನ್ನ ತಂದೆ ಮನೆಗೆ ಬಂದಿರುತ್ತೇನೆ. ನನ್ನ ಆಧಾರಕಾರ್ಡ ಮತ್ತು ಇತರ ದಾಖಲೆಗಳಲ್ಲಿ ನನ್ನ ವಿಳಾಸ ಗೌಸಿಯಾನಗರದ ಮನೆ ಇದೆ ಎಂದರೆ ಸರಿಯಲ್ಲ. ನನ್ನ ಅಕ್ಕನ ಮದುವೆಯಾಗುವ ಮುಂಚಿನಿಂದಲೂ ಆರೋಪಿ ಹಾರ್ಡವೇರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ನಿಜ. ಆತ ಬೆಳಿಗ್ಗೆ 8-9 ಗಂಟೆಗೆ ಕೆಲಸಕ್ಕೆ ಹೋದರೆ ರಾತ್ರಿ 9 ಗಂಟೆಗೆ ವಾಪಸ್ ಬರುತ್ತಿದ್ದ ಎಂದರೆ ಮದ್ಯಾಹ್ನ 2 ಗಂಟೆಗೆ ವಾಪಸ್ ಬರುತ್ತಿದ್ದ. ನಾನು ನನ್ನ ಅಕ್ಕ ಮತ್ತು ಭಾವನ ಬಳಿ ಹಣ ಪಡೆಯುತ್ತಿದ್ದೆ ಮತ್ತು ವಾಪಸ್ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ

ಅವರಿಗೆ ನನ್ನನ್ನು ಕಂಡರೆ ಆಗುತ್ತಿರಲಿಲ್ಲ ಮತ್ತು ಅವರು ನನ್ನನ್ನು ಮನೆಗೆ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತ ಮತ್ತು ರೇಶ್ಮಾಬಾನು ನಮ್ಮ ಹಿಂದಿನ ಮನೆಯಲ್ಲಿ ಬೋಗ್ಯಕ್ಕೆ ವಾಸವಿದ್ದರು ಎಂದರೆ ಸರಿಯಲ್ಲ. ಮದುವೆಯಾಗಿ 4 ವರ್ಷದ ಬಳಿಕ ಆರೋಪಿತ ತನ್ನ ತಮ್ಮ ನೌಸಾದ್ ನನ್ನು ಮನೆಗೆ ಕರೆದುಕೊಂಡು ಬಂದು ಇಟ್ಟುಕೊಂಡಿದ್ದ. ನೌಸಾದ್ ಎಷ್ಟು ವರ್ಷ ಅವರ ಮನೆಯಲ್ಲಿದ್ದ ಎಂದರೆ ಅವನು ಖಾಯಂ ಆಗಿ ಇರಲಿಲ್ಲ, ಬಂದ ಹೋಗುವುದು ಮಾಡುತ್ತಿದ್ದ. ನೌಸಾದ್ ನಿಗೆ ನನ್ನ ಅಕ್ಕ ರೇಶ್ಮಾಬಾನು ಜೊತೆ ಯಾವುದೇ ಸಂಬಂಧ ಇರಲಿಲ್ಲ. ಆರೋಪಿಗೆ ಅಣ್ಣ, ತಮ್ಮ, ಅಕ್ಕ ಇದ್ದಾರೆ ಎಂದರೆ ನಿಜ. ನೌಸಾದ್ ನಿಗೆ ಮದುವೆಯಾಗಿದೆ ಎಂದರೆ ಮದುವೆಯಾಗಿ ಹೆಂಡತಿಯನ್ನು ಬಿಟ್ಟಿದ್ದ ಎಂದು ಆರೋಪಿ ಹೇಳಿದ್ದ. ನೌಸಾದ್ ಮದುವೆಯಾಗಿ ತನ್ನ ಹೆಂಡತಿ ಜೊತೆ ಬೇರೆಯಾಗಿ ವಾಸವಿದ್ದ ಎಂದರೆ ಸರಿಯಲ್ಲ. ಅವನು ಯಾವತ್ತು ನನ್ನ ಅಕ್ಕ ಭಾವನ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ವಾಸವಿರುವವರೆಗೆ ಆರೋಪಿ ಮತ್ತು ನನ್ನ ಅಕ್ಕ ಚನ್ನಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಕ್ಕನಿಗೆ ನನ್ನ ತಂದೆಗೆ ಸೇರಿದ ಮನೆಯಲ್ಲಿ ವಾಸವಿರಲು ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನೇ ಬೋಗ್ಯಕ್ಕೆ ನೀಡಿದ್ದ 1 ಲಕ್ಷವನ್ನು ವಾಪಸ್ ಪಡೆದುಕೊಂಡು ಬೇರೆ ಮನೆಗೆ ಹೋಗಿದ್ದರು ಎಂದರೆ ನಿಜ. ಗಾಯತ್ರಿಪುರಂ ಮನೆಗೆ ನಾನೆ ಅವರ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದೆ. ಗಾಯತ್ರಿಪುರಂ ಮನೆ ಎಂ.ಸಿ.ಸಿ ಕಾಲೋನಿಯಲ್ಲಿದೆ ಎಂದರೆ ನಿಜ. ಅಲ್ಲಿ ಅಕ್ಕಪಕ್ಕ ಸಾಲು ಮನೆಗಳಿವೆ

ಎಂದರೆ ನಿಜ.  ಆ ಮನೆಗೆ ಯಾರಾದರೂ ಬಂದರೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತಿತ್ತು ಎಂದರೆ ನಿಜ. ಆ ಮನೆಯಲ್ಲಿ ಜೋರಾಗಿ ಮಾತನಾಡಿದರೆ ಅಕ್ಕಪಕ್ಕದವರಿಗೆ ಕೇಳುತ್ತಿತ್ತು ಎಂದರೆ ನಿಜ.  ನನ್ನ ಅಕ್ಕ ಮೃತಪಟ್ಟ ದಿನ ಮದ್ಯಾಹ್ನ 2 ಗಂಟೆಗೆ ನಾನು ಆ ಮನೆಗೆ ಹೋಗಿದ್ದೆ.  ನನ್ನ ಅಕ್ಕ ಸಾಯುವ ಹಿಂದಿನ ದಿನ ರಾತ್ರಿ 9 ಗಂಟೆಯಲ್ಲಿ ನಮ್ಮ ಮನೆಗೆ ಬಂದಿದ್ದ.  ರಾತ್ರಿ 9.30 ಕ್ಕೆ ನಾನು ಹಿಂದಿನ ಮನೆಯಲ್ಲಿ ಮಲಗುತ್ತೇನೆ ಎಂದು ಚಾಪೆ ತೆಗೆದುಕೊಂಡು ಹೋದ.  ಮರುದಿನ ನಾನು ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರಿಂದ ಎಷ್ಟು ಗಂಟೆಗೆ ಎದ್ದು ಹೋಗಿರುತ್ತಾನೆ ಎಂದು ಗೊತ್ತಿಲ್ಲ. ನಾನು ಕೆಲಸಕ್ಕೆ ಹೋಗುವಾಗ ಆರೋಪಿ ಮಲಗಿದ್ದನೋ ಇಲ್ಲವೋ ಎಂದು ನೋಡಿಲ್ಲ.  ಮದ್ಯಾಹ್ನ 1 ಗಂಟೆಗೆ ನನ್ನ ತಮ್ಮ ಫೋನ್ ಮಾಡಿದಾಗ ನನ್ನ ಅಕ್ಕನ ಕೊಲೆಯಾಗಿರುವುದು ಗೊತ್ತಾಯಿತು.  ಆರೋಪಿತ ಅದೇ ಮನೆಯಲ್ಲಿದ್ದರಿಂದ ಅವನೇ ಕೊಲೆ ಮಾಡಿದ್ದಾನೆ ಎಂದು ಗೊತ್ತಾಯಿತು. ಹಿಂದಿನ ದಿನ ಆರೋಪಿತ ನಿನ್ನ ಅಕ್ಕನನ್ನು ಕೊಲೆ ಮಾಡುತ್ತೇನೆ ಎಂದು ನನಗೆ ಹೇಳಿರಲಿಲ್ಲ, ನನ್ನ ತಾಯಿಗೆ ಹೇಳಿದ್ದ.  ನನ್ನ ಅಕ್ಕನಿಗೆ ನನ್ನ ತಂದೆಯ ಮನೆಯಲ್ಲಿ ಇರಲು ಇಷ್ಟವಿಲ್ಲದಿದ್ದರಿಂದ ಅವರ ಒತ್ತಾಯದಂತೆ ಬೇರೆ ಮನೆಗೆ ಹೋಗಿದ್ದರು ಎಂದರೆ ಸರಿಯಲ್ಲ.  ಆರೋಪಿತ ನನ್ನ ಅಕ್ಕ ಮತ್ತು ಅವರ ಮಕ್ಕಳನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ.  ನನ್ನ ಅಕ್ಕ ಮರಣ ಹೊಂದಿದ ದಿನ ಮದ್ಯಾಹ್ನ 2 ಗಂಟೆಗೆ ಆರೋಪಿ ಕೆಲಸದಿಂದ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ. ನನ್ನ ಅಕ್ಕನ ಕೊಲೆಯಾಗಿರುವುದು ತಿಳಿದು ನಾನು ಮತ್ತು ನಮ್ಮ ಸಂಬಂಧಿಕರು ಆ ಮನೆ

ಬಳಿ ಸೇರಿದ್ದೆವು ಎಂದರೆ ನಿಜ. ಆ ಕಾಲಕ್ಕೆ ನಾವೆಲ್ಲರೂ ಸೇರಿ ಆರೋಪಿತನಿಗೆ ಇವನೇ ಕೊಲೆ ಮಾಡಿದ್ದಾನೆ ಎಂದು ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಆರೋಪಿತ ಅಲ್ಲಿ ಇರಲಿಲ್ಲ. ಆರೋಪಿ ನನ್ನ ಅಕ್ಕನನ್ನು ಕೊಲೆ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿಗೆ ಹೊಡೆದು ಜೈಲಿಗೆ ಕಳುಹಿಸುವುದಾಗಿ ಹೇಳಿದ್ದರಿಂದ ಆತ ಅಲ್ಲಿಂದ ಓಡಿಹೋಗಿರುತ್ತಾನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು